ಶ್ರೀಮತಿ ಸುಮಾ ವಸಂತ (ಸಣ್ಣ ಪ್ರಮಾಣದ ಕೈಗಾರಿಕಾ ಉಪ ಸಚಿವರು).—ಮಾನ್ಯ ಉಪಾಧ್ಯಕ್ಷಣಿಯವರೆ, ಕುಂದಾಪುರ ತಾಲ್ಲೂಕಿನ ಕೋಟೇಶ್ವರದಲ್ಲಿ ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮವು ೬.೨ ಎಕರೆ ಜಮೀನನ್ನು ಕರ್ನಾಟಕ ಕೈಗಾರಿಕೆಗಳ ಪ್ರದೇಶಾಭಿವೃದ್ಧಿ ಮಂಡಲಿಯು ಮೂಲಕ ಪಡೆದುಕೊಂಡಿದ್ದು, ಈ ಜಮೀನಿನಲ್ಲಿ ೨-೩ ಮತ್ತು ೪ ಸೂಪರ್ ಮಿನಿ ಮಾರುಕಟ್ಟೆಯ ಮಳಿಗೆಗಳನ್ನು ನಿರ್ಮಾಣಕ್ಕೆ ತೆಗೆದುಕೊಳ್ಳಲಾಗಿದೆ. ಈ ಮಳಿಗೆಗಳು ಚಾವಣಿ ಹಂತಕ್ಕೆ ಮುಟ್ಟಿದ್ದು, ಇನ್ನು ೩ ಅಥವಾ ೪ ತಿಂಗಳಲ್ಲಿ ಕಟ್ಟಡದ ಕೆಲಸ ಮುಗಿಯುವ ನಿರೀಕ್ಷೆಯಿದೆ. ಈ ಕೈಗಾರಿಕಾ ವಸಾಹತುವು ಕೋಟೇಶ್ವರ–ಪಾಲಾಡಿ ರಸ್ತೆಯಲ್ಲಿದ್ದು ಕುಂದಾಪುರ ತಾಲ್ಲೂಕಿಗೆ ಅತಿ ಸಮೀಪದಲ್ಲಿದೆ.

ಉಪಾಧ್ಯಕ್ಷಣಿಯವರು.—ಮಾನ್ಯ ರಾಜೂಗೌಡರೆ, ನಿಮ್ಮ ನೊಂಟೀಸಿಗೆ ಮಾನ್ಯ ಮಂತ್ರಿಗಳು ಕಾಲಾವಕಾಶವನ್ನು ಕೇಳಿದ್ದಾರೆ.

(VII) ಮಂಗಳೂರಿನ ಪೋಲೀಸರಿಗೆ ಒಳ್ಳೆಯ ರೈನ್‌ಕೋಟ್ ಒದಗಿಸುವ ಬಗ್ಗೆ

ಶ್ರೀ ಬ್ಲೇಸಿಯಸ್ ಎಂ ಡಿಸೋಜ (ಮಂಗಳೂರು).—ಮಾನ್ಯ ಉಪಾಧ್ಯಕ್ಷಣಿಯವರೆ ಮಂಗಳೂರಿನಲ್ಲಿ ವಿಪರೀತ ಮಳೆಯಾಗುತ್ತಿದ್ದು ಪೋಲೀಸರಿಗೆ ೧೯೮೭ರಲ್ಲಿ ಕೊಟ್ಟಿದ್ದ ರೈನ್‌ಕೋಟ್ ತುಂಬಾ ತೆಳುವಾಗಿದ್ದು ಅದು ಹರಿದುಹೋಗಿರುವುದರಿಂದ ಮಳೆಯಲ್ಲೇ ಪೊಲೀಸರು ಕಾರ್ಯ ನಿರ್ವಹಿಸಬೇಕಾಗಿದೆ. ಆದ್ದರಿಂದ ಮಂಗಳೂರಿನ ಪೋಲೀಸರಿಗೆ ಒಳ್ಳೆಯ ರೈನ್‌ಕೋಟ್ ಕೂಡಲೇ ಒದಗಿಸಿ ದಕ್ಷತೆಯಿಂದ ಪೋಲೀಸರು ಕಾರ್ಯನಿರ್ವಹಿಸುವಂತೆ ಸೂಕ್ತ ಕ್ರಮ ಕೈಗೊಳ್ಳಬೇಕಾಗಿ ವಿನಂತಿಸುತ್ತೇನೆ.

ಶ್ರೀ ಎಂ. ರಾಜಶೇಖರಮೂರ್ತಿ.—ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಮುಖ್ಯ ಮಂತ್ರಿಗಳ ಪರವಾಗಿ ನಾನು ಈ ಹೇಳಿಕೆಯನ್ನು ನೀಡುತ್ತೇನೆ. ಸರ್ಕಾರದಲ್ಲಿ ಇಲ್ಲಿಯವರೆಗೂ ದಕ್ಷಿಣ ಕನ್ನಡ ಜಿಲ್ಲೆ ಮತ್ತು ಹೆಚ್ಚಾಗಿ ಮಳೆ ಬೀಳುವ ಜಿಲ್ಲೆಗಳ ಪೋಲೀಸ್ ಸಿಬ್ಬಂದಿಗಳಿಗೆ ತೊಳೆಯಲ್ಲದ ಪಾಟರ್ ಪ್ರೂಫ್ ಕೇಪ್‌ಗಳು ಸರಬರಾಜು ಮಾಡುತ್ತಿದ್ದು ಈಗ ಡಿಕ್‌ಬ್ಯಾಕ್ ಮಳೆ ಕೋಟುಗಳನ್ನು ಒದಗಿಸಲು ಇಲಾಖೆಯಿಂದ ಪ್ರಸ್ತಾವನೆ ಬಂದಿದ್ದು ಅದು ಪರಿಶೀಲನೆಯಲ್ಲಿರುತ್ತದೆ. ಶೀಘ್ರವೇ ಈ ಬಗ್ಗೆ ಸರ್ಕಾರೀ ಆದೇಶವನ್ನು ಹೊರಡಿಸಲಾಗುವುದು.

VIII) Providing the servicas of Grama Sahayak in each Villages.

SHRI MANOHAR AINAPUR (Ballolli).—One Gram-sahayak is provided to each Village Accountant to assist him in serving notices, recovery work and other village works viz., to get the collections of births and deaths information. But one Gram-Sahayak is not sufficient to assist Village Accountant as he has to cover several villages. due to this, general public as well as the Government Official suffer a lot.

Therefore, I request the Hon'ble Minister for Revenue and Labour to provide one Gram-Sahayak to each village.

SHRI K.H. PATIL (Minister for Revenue).—There are 39,900 villages in the State. At present 8,941 Village Accountants are working. Each Village Accountant has been entrusted with a single village or group of villages. There were 8,941 Grama Sahayakas asilsting each Village Accountant. Subsequently as the work oad of the village level has increased considerably, as many as 1,509. additional posts of Grama Sahayakas were created on 23-9-1982. At present there are 10,450 Grama Sahayakas assisting 8,95 Village Accountants.